


# ಯಾವೂರಾದ್ರೆ ನಂಗೇನು

ಯಾವೂರಾದ್ರೆ ನಂಗೇನು
ಯಾವ್ ದೇಶವಾದ್ರೆ ನಿಂಗೇನು
ತಿನ್ನೋದ್ ಅನ್ನ ಸುಮ್ನೆ
ಕುಡಿಯೋದ್ ನೀರು ತಾನೆ /ಪ/

ಇಲ್ಲಿಯ ಸೂರ್ಯ ಅಲ್ಲಿಗು ಹೋಗಿ
ಅಲ್ಲಿಯ ಚಂದ್ರ ಇಲ್ಲಿಗು ಬಾಗಿ
ಸೂರ್ಯ ಬೆಚ್ಚಗೆ ತನೆ
ಚಂದ್ರ ತಣ್ಣಗೆ ಸುಮ್ನೆ /ಪ/

ಉತ್ತರವೆಂದರೆ ಉತ್ತರವಲ್ಲ
ದಕ್ಷಿಣವೆಂದರೆ ದಕ್ಷಿಣವಲ್ಲ
ಪೂರ್ವ ಪಶ್ಚಿಮ ಹೇಳುವುದೇಗೆ
ದುಂಡನೆ ಭೂಮಿಗೆ ದಿಕ್ಕಿನ ಹಂಗೆ /ಪ/

ಅಲ್ಲಿಯ ಮೋಡಗಳಿಲ್ಲಿಗೆ ಬಂದು
ಸುರಿಸುವ ಮಳೆ ತಾನೊಂದೆ
ಇಲ್ಲಿಯ ಗಾಳಿ ಅಲ್ಲಿಗೆ ಸಂದು
ಆಗುವ ಚಳಿ ಒಂದೆ ತಾನೆ /ಪ/

ಅಲ್ಲಿಯ ನದೀಲಿ ಇರೋದು ನೀರೆ
ಜೀವ ಜಾಲದಲಿಲ್ಲ ಓರೆ
ಕುಡಿಯುವ ನೀರು ಒಂದೆ ಅಲ್ಲವೆ
ನೀರಿಲ್ಲದೆಯೆ ಊರು ಸಾಧ್ಯವೆ /ಪ/

# ಬುದ್ಧ ಕುಡಿದ ನೀರನೆ

ಬುದ್ಧ ಕುಡಿದ ನೀರನೆ
ನಾವು ಕುಡಿಯುತಿರೋದು
ಅವನು ಸುಳಿದ ಗಾಳಿಯಲ್ಲಿ
ನಾವು ಬದುಕುತಿರೋದು
ಅವನು ಆಡಿ ಹೋದ ಮಾತು
ಈಗ ಕೇಳುತಿರೋದು
ಬುದ್ಧ ಕುಂತ ಮರದ ನೆರಳು
ಇದೇ ನೋಡು ಈಗಲು
ಆದಕೆ ಬುದ್ಧ ಶಬ್ದದಲ್ಲಿ
ಮಂತ್ರ ಶಕ್ತಿ ಇರೋದು
ಬುದ್ಧನ ಹೆಜ್ಜೆ ಗುರುತಿನಲ್ಲಿ
ಜಲವು ಜಿನುಗುತಿರೋದು

